## ಬುತ್ತಿ ಚಿಗುರು

### ರವೆಯ ಮಹಿಮೆ

ರವೀಶ ಬೈಕ್ ರೇಸ್‌ನಲ್ಲಿ ಮೊದಲನೇ ಸ್ಥಾನ ಗಳಿಸಿದ. ಮಾಧ್ಯಮದವರೆಲ್ಲ ನಾ ಮುಂದೆ ತಾ ಮುಂದೆ ಎಂದು ರವೀಶನ ವಿಜಯದ ಗುಟ್ಟು ಕೇಳಲು ದಾವಿಸಿದರು. ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ರವೀಶ, 'ಮನೆಯಿಂದ ಹೊರಡುವಾಗ ನನ್ನ ಹೆಂಡತಿ 2 ಕೆಜಿ ಉಪ್ಪಿಟ್ಟು ರವೆ ತರಲು ಹೇಳಿದ್ದಳು. ರೇಸ್‌ನ ಗದ್ದಲದಲ್ಲಿ ನಾನು ಮರೆತು ಬಿಟ್ಟಿದ್ದೆ. ರೇಸ್ ಶುರುವಾಗುವ ಹೊತ್ತಿಗೆ ಅವಳು ಹೇಳಿದ್ದು ನೆನಪಾಯ್ತು... ಅಷ್ಟೇ'.

**ಮಯೂರ ಮಸೂತಿ**





### ಕಲ್ಪನಾಶೀಲತೆ...

ಸಂದರ್ಶನದ ಮುಖಾಂತರ ಪತ್ರಿಕಾಲಯವೊಂದರಲ್ಲಿ ಕೆಲಸ ಪಡೆದಿದ್ದ ಗೋವಿಂದನನ್ನು ಒಂದೆರಡು ದಿನದಲ್ಲಿಯೇ ತಮ್ಮ ಕ್ಯಾಬಿನ್‌ಗೆ ಕರೆಸಿಕೊಂಡ ಸಂಪಾದಕರು, 'ಏನ್ರಿ ಗೋವಿಂದ? ಏಳು ವರ್ಷಗಳ ಅನುಭವ ಇದೆ ಅಂತ ಹೇಳಿಕೊಂಡು ಕೆಲಸ ಗಿಟ್ಟಿಸಿಕೊಂಡಿರಿ. ಆದರೆ ಇದೇ ನಿಮ್ಮ ಮೊದಲ ಕೆಲಸ ಅಂತ ಗೊತ್ತಾಯ್ತು. ಯಾಕೆ ಹೀಗೆ ಮಾಡಿದ್ರಿ?' ಎಂದರು. ಅದಕ್ಕೆ ಗೋವಿಂದ, 'ಹೌದು ಸರ್, ನೀವು ಜಾಹೀರಾತಿನಲ್ಲಿ ಕಲ್ಪನಾಶೀಲ ಬರಹಗಾರನಿಗೆ ಮೊದಲ ಆದ್ಯತೆ ಎಂದು ಹಾಕಿಸಿದ್ರಿ, ಅದಕ್ಕೇ ನಾನು ನನ್ನ ಕಲ್ಪನಾಶೀಲತೆಯನ್ನು ಪ್ರದರ್ಶಿಸಿದೆ' ಎಂದಾಗ ಸಂಪಾದಕರು ಸುಸ್ತು.

**ಶಂಕರೇಗೌಡ ತುಂಬಕೆರೆ**